ಓಎಸ್. 346/2024 ಪಿಡಬ್ಲ್ಯೂ:1

ದಿನಾಂಕಃ 02.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್ ಆರ್ ಎಸ್ ವಕೀಲರಿಂದಃ

ನಾನು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿರುವ ಅಂಶಗಳು ಸರಿಯಾಗಿದ್ದು, ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ.

ನನ್ನ ವಾದಕ್ಕೆ ಪೂರಕವಾಗಿ ದಿಃ15.02.1971 ರಂದು ಬರೆಯಲಾದ ಶುದ್ಧಬೋಗ್ಯ ಪತ್ರ ಸಂಖ್ಯೆ3255/1970-71 ರ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು, ಬೇಡರಪುರ ಗ್ರಾಮದ ಸರ್ವೇ ನಂ. 192 ರ ಪಹಣಿ ಪತ್ರಿಕೆಯ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 2 ಎಂದು, ನನ್ನ ತಾಯಿಯ ಮರಣ ಪ್ರಮಾಣ ಪತ್ರದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 3 ಎಂದು, ಆರ್ ಎ ಸಂಖ್ಯೆ 340/2021 ರಲ್ಲಿನ ದಿಃ17.08.2024 ರ ಉಪವಿಭಾಗಾಧಿಕಾರಿಗಳ ಆದೇಶದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 4 ಎಂದು, ಒಂದು ವಂಶವೃಕ್ಷ ಹಾಜರು ಪಡಿಸಿದ್ದು ಸೂಕ್ತ ಅಧಿಕಾರಿಗಳು ದೃಡೀಕರಿಸದ ಕಾರಣ ತಕರಾರಿಗೆ ಒಳಪುಟ್ಟ ನಿಪಿ 5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.
(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.